ಹೆಚ್ಚು ಪರಿಣಾಮಕಾರಿಯಾಗಿ ಅದನ್ನು ಅವರಿಗೆ ತಿಳಿಸಿರುತ್ತೇವೆ ಎಂದು ನನ್ನ ಭಾವನೆ. ಯಾರು ಸಂಬಂಧಪಟ್ಟವರು ಇರುತ್ತಾರೆ ಅವರಿಗೆಲ್ಲ ಗೊತ್ತಾಗಿರುತ್ತದೆ ಅವರು ತಿಳಿದುಕೊಳ್ಳಬೇಕು. ಆದರೆ ನಾವು ಸಭೆಯಲ್ಲಿ ಕೆಲಸಮಾಡತಕ್ಕ ವೇಳೆಯಲ್ಲಿ ಪ್ರತಿಯೊಂದನ್ನು ವಿವರಿಸಿ ಹೇಳಬೇಕಾಗಿಲ್ಲ. ಕೆಲವು ಸೂಕ್ಷ್ಮ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದಾಗ ಅದು ಅವರಿಗೆ ಅರ್ಥವಾಗುತ್ತದೆ. ನನಗೇನು ಸಮಾಧಾನವೂ ಇಲ್ಲ, ಸಂತೋಷವೂ ಇಲ್ಲ. ತಾವೇನು ವಿಚಾರ ಪ್ರಸ್ತಾಪ ಮಾಡಿದ್ದೀರಿ, ತಾವು ವಿರೋಧಪಕ್ಷದ ನಾಯಕರು, ಈಶ್ವರಪ್ಪನವರು ಹೇಳಿರತಕ್ಕದ್ದನ್ನು ಹಾಸ್ಯವಾಗಿ ಅಥವಾ ಲಘುವಾಗಿ ತೆಗೆದುಕೊಳ್ಳತಕ್ಕ ವಿಚಾರವೇನು ಅಲ್ಲ. ಗೆಳೆಯರಾದ ಮಾನ್ಯ ಬೈರೇಗೌಡರು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಪ್ರಯತ್ನಪಟ್ಟರೆ ಹೊರತು ಅದು ಸಮಂಜಸವಾದ ಸಮರ್ಥನೆಯಲ್ಲವೆಂದು ನನ್ನ ಮನಸ್ಸಿಗೆ ಅನಿಸಿದೆ. ಏನೇ ಹೇಳಲಿ ತಮ್ಮದೇ ಆದ ರೀತಿಯಲ್ಲಿ ನಾವೆಲ್ಲರೂ ಒಂದೇ ರೀತಿಯಲ್ಲಿ ಕೆಲಸ ಮಾಡಬೇಕು. ಆದರೆ ಏನು ಮಾಡುವುದು ಇತಿಮಿತಿ ಕೂಡ ಇಲ್ಲ. ನಿನ್ನೆ ಬೈರೇಗೌಡರು ನನ್ನ ಕಛೇರಿಯಲ್ಲಿ ಕುಳಿತಿದ್ದಾಗ ಉಪಾಧ್ಯಕ್ಷರು ಮತ್ತು ನಾನು ಇಬ್ಬರೂ ಪಕ್ಕ ಪಕ್ಕದಲ್ಲೇ ಕುಳಿತಿದ್ದೋ, ಬೆಲ್ ಆಫ್ ಆಯಿತು ಎಂದು ಹೇಳಿ ನಾವಿಬ್ಬರೂ ಇಲ್ಲೇ ಇದ್ದೇವೆಂದು ಹೇಳಿ ಉಪಾಧ್ಯಕ್ಷರು ಎದ್ದು ಓಡುವುದಕ್ಕೆ ಹೋದರು. ಅಂದರೆ ಸದನಕ್ಕೆ ಯಾವರೀತಿಯ ಗೌರವವನ್ನು ಕೊಡಬೇಕು ಎನ್ನತಕ್ಕ ಒಂದು ಮನೋಭಾವನೆ ಅವರಲ್ಲಿ ಹೇಗಿದೆ ಎನ್ನುವುದಕ್ಕೆ ಇದೊಂದು ಉದಾಹರಣೆ ನಾನು ಹೇಳುತ್ತಿದ್ದೇನೆ. ಅವರು ಅನಿವಾರ್ಯ ಸ್ಥಿತಿಯಲ್ಲಿದ್ದರೆ ಡಿಫೆಂಡ್ ಮಾಡುವುದಕ್ಕೆ ಹೇಳಬೇಕು. ಎಲ್ಲರೂ ಕೂಡ ಉಪಾಧ್ಯಕ್ಷರ ನಡತೆ ನೋಡಿ ಕಲಿತುಕೊಳ್ಳಬೇಕು. ಚಿಕ್ಕವರು ಎಲ್ಲರೂ ಸದನದೊಳಗೆ ಬರಲಿಕ್ಕೆ ಅವಕಾಶ ಸಿಕ್ಕಿದೆ, ಇದೊಂದು ದೊಡ್ಡ ಪುಣ್ಯ. ಈ ಮಾತನ್ನು ನಾನು ಅನೇಕ ಸಲ ಹೇಳಿದ್ದೇನೆ. ತಿಳಿದುಕೊಳ್ಳುವುದಿಲ್ಲ ನಮ್ಮ ಸ್ನೇಹಿತರು ನಾನೇನು ಮಾಡುವುದು? ಎಷ್ಟು ಜನರು ಇದ್ದಾರೆ ಕರ್ನಾಟಕ ರಾಜ್ಯದಲ್ಲಿ? ಅವರೆಲ್ಲರೂ ಇಲ್ಲಿ ಒಳಗಡೆ ಬರಲಿಕ್ಕೆ ಆಗುತ್ತದೆಯೇ? ಎಷ್ಟು ಜನರು ಇದ್ದಾರೆ ಕರ್ನಾಟಕ ರಾಜ್ಯದಲ್ಲಿ? ಅವರೆಲ್ಲರೂ ಇಲ್ಲಿ ಒಳಗಡೆ ಬರಲಿಕ್ಕೆ ಆಗುತ್ತದೆಯೆ? ಅಥವಾ ಅರ್ಹತೆ ಕಳೆದುಹೋದಮೇಲೆ ಬರುವುದಕ್ಕೆ ಆಗುತ್ತದೆಯೇ? ಅರ್ಹತೆ ಪಡೆದುಕೊಳ್ಳುವುದಕ್ಕೆ ಎಷ್ಟು ಪ್ರಯತ್ನ ಪಡುತ್ತೇವೆ? ಅದನ್ನು ಉಳಿಸಿಕೊಳ್ಳುವುದಕ್ಕೆ ಎಷ್ಟು ಪ್ರಯತ್ನ ಪಡುತ್ತೇವೆ. ಏಕೆ ಈ ಸ್ಥಿತಿ? ಮನಸ್ಸಿಗೆ ಬಹಳ ಚಿಂತೆಯಾಗುತ್ತದೆ.

ಪ್ರಸ್ತಾವಗಳು

ಚುನಾವಣಾ ಪ್ರಸ್ತಾವ

ಶ್ರೀ ಡಿ. ಮಂಜುನಾಥ (ಅರಣ್ಯ ಸಚಿವರು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ವಾರ್ತಾ ಮತ್ತು ಪ್ರಚಾರ ಇಲಾಖೆಯ ಮಂತ್ರಿಗಳ ಪರವಾಗಿ

1976ನೆಯ ಇಸವಿಯ ಕರ್ನಾಟಕ ವಿಶ್ವವಿದ್ಯಾನಿಲಯಗಳ ಶಾಸನದ 21(1)(14)ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ

ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಮಂಗಳೂರು ವಿಶ್ವವಿದ್ಯಾನಿಲಯದ ಸೆನಟ್‌ಗೆ ಐದು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿಯ ಪ್ರಸ್ತಾವ.

10.50 ಪಿ.ಎಂ

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಇದರಲ್ಲಿ (ಅ) ನಿಯಮ 211(1)ನ್ನು ತೆಗೆದುಹಾಕಲಾಗಿದೆ. (ಆ) ನಿಯಮ 370ನ್ನು ಈ ಕೆಳಕಂಡಂತೆ ಪ್ರತಿಯೋಜಿಸಲಾಗಿದೆ.

370 (1) ಸದನದ ಸದಸ್ಯರ ಅನುಕೂಲ ಮತ್ತು ಸೌಕರ್ಯಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಪರಿಶೀಲಿಸಲು ಮತ್ತು ಆ ಬಗ್ಗೆ ಸಲಹೆ ನೀಡಲು ಒಂದು ಸದನ ಸಮಿತಿಯನ್ನು ರಚಿಸತಕ್ಕದ್ದು.

2) ಸಮಿತಿಯು ವಿಧಾನಸಭಾ ಉಪಾಧ್ಯಕ್ಷರನ್ನು ಮತ್ತು ಏಕ ವರ್ಗಾವಣೆಯ ಮತದ ಮೂಲಕ ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ಚುನಾಯಿತರಾಗುವ ಎಂಟು ಮಂದಿ ಸದಸ್ಯರನ್ನು ಹೊಂದಿರತಕ್ಕದ್ದು.

3) ಸಮಿತಿಯು ಒಂದು ವರ್ಷವನ್ನು ಮೀರದ ಅವಧಿಯವರೆಗೆ ಅಧಿಕಾರದಲ್ಲಿರತಕ್ಕದ್ದು.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಯಿತು.

ಡಾ|| ಎಂ.ಪಿ. ಕರ್ಕಿ : ಅಧ್ಯಕ್ಷರೆ, ಸರಿಯಾಗಿ ಕೇಳಿಸಲಿಲ್ಲ...

ಅಧ್ಯಕ್ಷರು : ರೂಲ್ಸ್ ಆಫ್ ಪ್ರೊಸೀಜರ್‌ಗೆ ಅಮೆಂಡ್‌ಮೆಂಟ್ ಮಾಡಿದ್ದೇವೆ.

ಡಾ|| ಎಂ.ಪಿ. ಕರ್ಕಿ : ನಮಗೆ ಕೇಳಿಸಲಿಲ್ಲ. ನಾವು ಕೇಳುವುದಕ್ಕೆ ಪ್ರಯತ್ನಮಾಡಿದರೂ ಆಗಲಿಲ್ಲ. ಮಾನ್ಯ ಮಂತ್ರಿಗಳು ಸ್ವಿಚ್ ಹಾಕದೆ ಮಾತನಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ಅಸೆಂಬ್ಲಿ ಮತ್ತ ಕೌನ್ಸಿಲ್ ಸೆಕ್ರೆಟರಿಯೇಟ್‌ಗಳು ಪ್ರತ್ಯೇಕವಾದ್ದರಿಂದ ಅಸೆಂಬ್ಲಿಗೆ ಹೌಸ್ ಕಮಿಟಿ ಮತ್ತು ಕೌನ್ಸಿಲ್‌ಗೆ ಬೇರೆ ಹೌಸ್ ಕಮಿಟಿ ಮಾಡಬೇಕೆಂದು ಇದೆ. ಹಿಂದೆ ಇದುವರೆಗೆ ಜಾಯಿಂಟ್ ಹೌಸ್ ಕಮಿಟಿ ಇತ್ತು. ಇದಕ್ಕೆ ಒಂದು ತಿದ್ದುಪಡಿಯನ್ನು ತಂದು ನಮಗೆ ಪ್ರತ್ಯೇಕ ಹೌಸ್ ಕಮಿಟಿಯನ್ನು ಮಾಡಿಕೊಂಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಸಭೆ ಮತ್ತು ಕೌನ್ಸಿಲ್ ಎರಡೂ ಬೇರೆ ಬೇರೆ ಆದಕಾರಣ ತಾವು ಈ ತಿದ್ದುಪಡಿಯನ್ನು ತಂದಿದ್ದೀರಿ. ಇದಕ್ಕೆ "There shall be appointed a House